# ಕಥೋಪದೇಶ

## ಹಾಳು ಹಳ್ಳಿಗಳು

ಘಜನಿಯ ರಾಜನಾದ ಮಹಮ್ಮದನಿಗೆ ಊರೂರುಗಳನ್ನು ಗೆದ್ದು ಅವುಗಳನ್ನು ಹಾಳು ಗೆಡಹುವುದೆಂದರೆ ಬಹಳ ಇಷ್ಟ. ಅವನ ರಾಜ್ಯದಲ್ಲಿ ಆ ರೀತಿ ಹಾಳುಗೆಡಹಿ ಪಾಳುಬಿದ್ದ ಹಳ್ಳಿಗಳು ಬೇಕಾದಷ್ಟು ಇದ್ದವು.

ಅವನ ಮಂತ್ರಿಯು ರಾಜನಿಗೆ ಹೇಗಾದರೂ ಮಾಡಿ ಬುದ್ಧಿ ಹೇಳಿ ದಾರಿಗೆ ತರಬೇಕು ಎಂದು ಕಾಯುತ್ತ ಇದ್ದನು. ಅದಕ್ಕೊಂದು ಸಂದರ್ಭ ಬಂತು.



ಕಲೆ : ಪುರುಷೋತ್ತಮ ಕಾರಂತ

ಒಮ್ಮೆ ರಾಜ ಮಂತ್ರಿಯರಿಬ್ಬರೂ ಬೇಟೆಯಾಡುವುದಕ್ಕೆ ಹೋಗಿ, ಬಹಳ ದಣಿದು ಒಂದು ಮರದ ಕೆಳಗೆ ವಿಶ್ರಮಿಸಿಕೊಳ್ಳುತ್ತಿದ್ದರು. ಯಾವುದೋ ಹಾಳೂರ ಆ ಮರದ ಮೇಲೆ ಗೂಬೆಗಳು ಗೊಣಗುತ್ತಿದ್ದವು.

ಅದನ್ನು ಕೇಳಿ ಮಂತ್ರಿಯೆಂದ “ ರಾಜಾ, ನನಗೆ ಪಶುಪಕ್ಷಿಗಳ ಮಾತನ್ನು ಅರ್ಥ ಮಾಡಿಕೊಳ್ಳಲು ಬರುತ್ತದೆ. ಈ ಗೂಬೆಗಳು ಏನು ಮಾತನಾಡಿಕೊಳ್ಳುತ್ತಿವೆ ಗೊತ್ತೇನು? ‘ಮದುವೆಯೊಂದರಲ್ಲಿ ವಧುವಿನ ತಂದೆ ವರನ ತಂದೆಗೆ ಐನೂರು ಹಾಳುಹಳ್ಳಿಗಳನ್ನು ಕೊಡುತ್ತಾನಂತೆ. ಇದೇನೂ ಅಚ್ಚರಿಯ ಸಂಗತಿಯಲ್ಲ. ಏಕೆಂದರೆ ಘಜನಿಯ ರಾಜ್ಯದಲ್ಲಿ ಇರುವ ತನಕ ಹಾಳು ಹಳ್ಳಿಗಳಿಗೆ ನಮಗೇನೂ ಕೊರತೆ ಇಲ್ಲ’ ಎಂದು ಗೂಬೆಗಳು ಮಾತನಾಡಿಕೊಳ್ಳುತ್ತಿವೆ” ಎಂದನು.

ಮಂತ್ರಿಯ ಮಾತಿನ ಮೋಡಿಯಿಂದ ರಾಜನಾದ ಮಹಮ್ಮದನಿಗೆ ಅರಿವು ಉಂಟಾಯಿತು. ಅವನು ತನ್ನ ಮನಸ್ಸಿನಲ್ಲಿ ಇನ್ನೆಂದೂ ನಾನು ಹಳ್ಳಿಗಳನ್ನು ಹಾಳುಗೆಡಹುವುದಿಲ್ಲ ಎಂದು ದೃಢ ನಿರ್ಧಾರ ಮಾಡಿಕೊಂಡನು.